# ಬಿಳಿ ಗೂಬೆ

ಪಶ್ಚಿಮ ಘಟ್ಟಗಳಲ್ಲಿ ಕಪ್ಪು ಅಥವಾ ಬೂದು ಬಣ್ಣದ ಗೂಬೆಗಳು ಕಾಣಸಿಗುವುದು ಸಾಮಾನ್ಯ. ಆದರೆ, ಕಾಳಿ ಕಣಿವೆಯ ಕಾಡಿನಂಚಿನಲ್ಲಿ ಬಿಳಿಯ ಬಣ್ಣದ ಗೂಬೆ ಅಪರೂಪಕ್ಕೆ ಕಂಡು ಬಂದಿದೆ. ಬೆನ್ನಿಗೆ ಬಂಗಾರದಂತಹ ವರ್ಣದ ಹೊದಿಕೆ ಇದ್ದು ಹೊಟ್ಟೆಯ ಭಾಗದಲ್ಲಿ ಬಿಳುಪಾಗಿದೆ. ಸಾಮಾನ್ಯ ಗೂಬೆಗಳಿಗಿಂತ ಗಾತ್ರದಲ್ಲಿ ದೊಡ್ಡದಿದೆ.

■ ದೀಕ್ಷಾ ದತ್ತಾತ್ರೇಯ, ಯಲ್ಲಾಪುರ





# ಸ್ವಾದರಮಾವ ಹೊತ್ತ ತೊಟ್ಲ

ಅಕ್ಕ ಮೊದಲ ಬಾಣಂತನ ತೌರಮನ್ಯಾಗ ಮಾಡಕೊಂಡು ಗಂಡನ ಮನಿ ಒಳಗ್ಹೋಗಾಗ ಅಕಿದು ತಮ್ಮ ಅಂದ್ರ ಆ ಕೂಸಿನ ಸ್ವಾದರ ಮಾವ ತೆಲಿಮ್ಯಾಗ ತೊಟ್ಟಲ್ ಇಟ್ಟಕೊಂಡು ಅವ್ರ ಮನೀಗ ಮುಟ್ಟಿಸಿ ಅವರಕ್ಕನ ಆಶೀರ್ವಾದ ಪಡ್ಯಾ ಪದ್ಧತಿ ಉತ್ತರ ಕರ್ನಾಟಕದಾಗ ಈಗೂನೂ ಚಾಲ್ತಿದಾಗ ಆದ. ಅಕಿ ಮನಿ ಒಳಗ ಹೋಗಾಮುಂದ ರೊಟ್ಟಿಮ್ಯಾಲ ಎಣ್ಣೆಹಾಕಿ ಅವ್ನ ತೆಲಿಮ್ಯಾಗಿಂದು ಹಾಯ್ಸಿ ನಿವಾಳಿ ತೆಗಿತಾರ. ಆಮ್ಯಾಲ ಅವ್ನಿಗ ಆರ್ತಿ ಮಾಡಿ ಹಣೆಗ ಕುಂಕುಮ ಹಚ್ಚಿ 'ನೀ ಶ್ಯಾಣ್ಯಾ ಆಗಿ, ಭಾಳ ಸಾಲಿ ಕಲ್ತು, ಕೀರ್ತಿ ತೊಂಬಾ' ಅಂತ ಆಶೀರ್ವಾದ ಮಾಡತಾಳ. ಹಳ್ಳ್ಯಾಗ ಬಿಡ್ರಿ, ಈ ಪದ್ಧತಿ ವಿಜಯಪುರ ನಗರದಾಗ ಇದ್ದದ್ದು ನಮಗ ಭಾಳ ಖುಷಿ ಆಗ್ಯಾದ. ಯ್ಯಾನಂತೀರಿ!

■ ಪಂಡಿತರಾವ ಪಾಟೀಲ, ಸರಸಂಬಾ

# ಮೈಸೂರು ಅರಸರ ಛಾಯಾಚಿತ್ರ

ಮೈಸೂರು ಅರಸರು ಇದುವರೆಗೂ ಪಾರಂಪರಿಕವಾಗಿ, ತಮ್ಮ ಅಸ್ತಿತ್ವ, ಘನತೆ, ಗೌರವ, ಪ್ರಜೋಪಕಾರಿ ಕೆಲಸಗಳ ಮೂಲಕ ಹೆಸರು ಮಾಡಿ ಸಾಂಸ್ಕೃತಿಕ ನಗರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದೊಂದು ಹಿಂದಿನ ಅಪರೂಪದ ಕಪ್ಪು– ಬಿಳುಪಿನ ಛಾಯಾಚಿತ್ರ ಮುದ ನೀಡುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹುಟ್ಟು ಹಬ್ಬದ ಅದ್ಧೂರಿ ಮೆರವಣಿಗೆ ದೃಶ್ಯವಿದು. ಅವರೊಟ್ಟಿಗೆ ಕಂಠೀರವ ನರಸಿಂಹರಾಜ ಒಡೆಯರ್, ಮಧ್ಯದಲ್ಲಿ ಬಾಲಕ ಜಯಚಾಮರಾಜ ಒಡೆಯರ್ ತಳಿರು, ತೋರಣಗಳಿಂದ ಸಿಂಗರಿಸಿದ ಅರಮನೆ, ವಂದಿಮಾಗದರು, ಬಿರುದುಬಾವಲಿ, ಛತ್ರಿ ಚಾಮರದವರು, ಸರ್ವಾಲಂಕೃತ ಅಶ್ವರೋಹಿಗಳಾಗಿ ಪ್ರಭಾತಫೇರಿ ಹೊರಟಿರುವ ಅಸಾಮಾನ್ಯ ದೃಶ್ಯ. ಅದರಲ್ಲೂ, ಜಯಚಾಮರಾಜೇಂದ್ರ ಒಡೆಯರ್ ಸವಾರಿ ಮಾಡಿದ ಪಂಚಕಲ್ಯಾಣಿ ಕುದುರೆ (ಶ್ವೇತ ವರ್ಣ) ವಿಶೇಷ. ಇವರೊಟ್ಟಿಗೆ ಚಿತ್ರದಲ್ಲಿ ಆಸ್ಥಾನದ ದಿವಾನರು, ನಗರದ ಪ್ರತಿಷ್ಠಿತ ಆಮಂತ್ರಿತರಿದ್ದಾರೆ.

■ ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

